"ಎಲ್ಲಿದ್ದೀಯ..." ಕೇಳಿದ್ದ.

"ಬೆಂಗಳೂರಿನಲ್ಲಿ. ನಿನ್ನೆ ಬೆಳಿಗ್ಗೆಯೇ ವಿಶಾಖಪಟ್ಟಣದಿಂದ ನೇರವಾಗಿ ಬೆಂಗಳೂರಿಗೆ ಬಂದು ಬಿಟ್ಟೆ. ನಿನಗೆ ಫೋನ್ ಮಾಡಬೇಕೆಂದುಕೊಂಡೆ. ಅಷ್ಟರಲ್ಲಿ ನೀನೆ ಮಾಡ್ತಿದ್ದೀಯ..." ಸುಳ್ಳು ಪೋಣಿಸಿದ್ದೆ.

"ಸುದ್ದಿ ಕೇಳ್ದ... ಇಲ್ಲಿ ಆಂಧ್ರದಲ್ಲಿ ಹಾಟ್ ಅಂಡ್ ಹಾರ್ಟ್ ಬ್ರೇಕಿಂಗ್ ನ್ಯೂಸ್..." ಒಂಥರಾ ಎಕ್ಸೈಟ್‌ಮೆಂಟ್ ಇತ್ತು ಮಾತುಗಳಲ್ಲಿ.

"ಏನು ಅಂಥಾದ್ದು..." ಕುತೂಹಲ ತೋರಿಸಿದ್ದೆ.

"ಅದೇ ರಾಜಮಹೇಂದ್ರಿ ಜೈಲಿನಲ್ಲಿದ್ದನಲ್ಲ ಪ್ರತಾಪಸಿಂಹರೆಡ್ಡಿ. ಅವನನ್ನು ಪೊಲೀಸರು ಈ ಅರ್ಧ ಗಂಟೆ ಹಿಂದೆ ಎನ್‌ಕೌಂಟರ್‌ನಲ್ಲಿ ಖತಂ ಮಾಡಿಬಿಟ್ಟಿದ್ದಾರೆ..."

"ಮೈಗಾಡ್..." ಉದ್ಗಾರ ಹೊರಡಿಸಿದ್ದೆ.

"ಅವನ ಜೊತೆ ಹೈದರಾಬಾದಿನ ಫೇಮಸ್ ಡಾನ್ ಮಹಮ್ಮದ್ ಪೈಲ್ವಾನ್ ಕೂಡಾ ಹತನಾಗಿದ್ದಾನೆ. ಕೋರ್ಟಿಗೆ ಹೋಗುವ ಮಧ್ಯದಲ್ಲಿ ಪ್ರತಾಪಸಿಂಹರೆಡ್ಡಿನ ಎಸ್ಕೇಪ್ ಮಾಡಿಸಲು ಮಹಮ್ಮದ್ ಪೈಲ್ವಾನ್ ಪ್ರಯತ್ನ ಪಟ್ಟು ಪೊಲೀಸ್ ಮೇಲೇನೇ ಫೈರಿಂಗ್ ಮಾಡಿದ್ನಂತೆ. ಪ್ರತಿಯಾಗಿ ಪೊಲೀಸರು ಸುತ್ತುವರೆದು ಇಬ್ಬರನ್ನೂ ಮುಗಿಸಿದ್ದಾರೆ. ಇಷ್ಟಕ್ಕೂ ಎನ್‌ಕೌಂಟರ್ ಮಾಡಿದ್ದು ಯಾರು ಗೊತ್ತಾ. ಅದೇ ಪ್ರತಾಪಸಿಂಹರೆಡ್ಡಿ ಪ್ರೀತಿ ಮಾಡುವಂತೆ ನಂಬಿಸಿ ಮುಂಬಯಿಗೆ ಕರೆದುಕೊಂಡು ಹೋಗಿ ಕೊಂದು ರಕ್ತ ಕುಡಿದನಲ್ಲ... ಆ ಹುಡುಗಿಯ ತಂದೆ ಅನ್ನಾವರಂ ಮಂಡಲದ ಸರ್ಕಲ್ ಇನ್‌ಸ್ಪೆಕ್ಟರ್. ಆ ಪೊಲೀಸ್ ಆಫೀಸರ್‌ಗೆ ಹತ್ತು ಲಕ್ಷ ರೂಪಾಯಿ ಬಹುಮಾನ ಅನೌನ್ಸ್ ಆಗಿದೆ. ಮೊನ್ನೆ ನೀನು ಹೇಳಿದಾಗಿನಿಂದ ನಮ್ಮ ಜೈಲು ಡಿಪಾರ್ಟ್‌ಮೆಂಟ್‌ನೋರು ಪ್ರತಾಪಸಿಂಹರೆಡ್ಡಿನ ಚೆನ್ನಾಗಿಯೇ ನೋಡಿಕೊಳ್ತಿದ್ರು. ನಿನ್ನೆ ಮಹಮ್ಮದ್ ಪೈಲ್ವಾನ್ ಪಬ್ಲಿಕ್ ಮೀಟಿಂಗ್‌ನಲ್ಲಿ ಮುಖ್ಯಮಂತ್ರಿನ ಹೆಂಗಂದ್ರಂಗೆ ಮಾತನಾಡಿದ್ನಂತೆ. ಸಮಾಧಾನ ಮಾಡಲು ಬಂದ ಪೊಲೀಸರ ಮೇಲೂ ಎಗರಾಡಿದ್ದನಂತೆ..." ಕೃಷ್ಣ ಮನೋಹರನ ಮಾತು ಮುಗಿಯುತ್ತಿದ್ದಂತೆ ವಿಶ್ವನಾಥ ವೇಮುಲಶಾಸ್ತ್ರಿಯ ಫೋನು.

"ಏನು ಇದೆಲ್ಲ..." ಭಾವುಕನಾಗಿದ್ದೆ ನಾನು.

"ಇಲ್ಲಿ ಚೆರ್ಲಪಲ್ಲಿಯಲ್ಲಿ ಎಲ್ಲಾ ಅಯೋಮಯ ಆಗಿದೆ. ಪ್ರತಾಪಸಿಂಹರೆಡ್ಡಿಯ ಎನ್‌ಕೌಂಟರ್ ಸುದ್ದಿ ಕೇಳಿ ವೀರಾಂಜನೇಯರೆಡ್ಡಿಗೆ ಮ್ಯಾಸೀವ್ ಹಾರ್ಟ ಅಟ್ಯಾಕ್ ಆಗಿ ಹತ್ತು ನಿಮಿಷಗಳ ಹಿಂದೆ ಮೊನ್ನೆ ನಾವು ಮೀಟ್ ಮಾಡಿದ್ವಲ್ಲ ಅದೇ ರೂಮಿನಲ್ಲಿ ಹೆಣ ಆಗಿ ಮಲಗಿದ್ದಾರೆ. ಮುಖ್ಯ ಮಂತ್ರಿ ಕಾರ್ಯಕ್ರಮಕ್ಕೆಂದು ನಿನ್ನೆ ಬೆಳಿಗ್ಗೆ ಇಲ್ಲಿಗೆ ಬಂದಿದ್ದ ಮಹಮ್ಮದ್ ಪೈಲ್ವಾನ್ ನಿನ್ನೆ ರಾತ್ರಿ ಇಲ್ಲೇ ಉಳ್ಕೊಂಡಿದ್ದ. ಮಹಮ್ಮದ್ ಪೈಲ್ವಾನ್ ಮುಖಾಂತರ ಪ್ರತಾಪಸಿಂಹರೆಡ್ಡಿನ ಎಸ್ಕೇಪ್ ಮಾಡಿಸುವ ಪ್ಲಾನ್ ಮಾಡಿದ್ದು ನರಸಿಂಹರೆಡ್ಡಿನೇ. ಇನ್ನೊಂದು ವಿಷಯ ಗೊತ್ತಾ, ಮಹಮ್ಮದ್ ಪೈಲ್ವಾನ್ ನೂರಾರು ಕೋಟಿ ರೂಪಾಯಿ ಆಸ್ತಿಯನ್ನು ನರಸಿಂಹರೆಡ್ಡಿಯ ಹೆಸರಲ್ಲೆ ಮಾಡಿದ್ದಾನೆ. ಮಹಮ್ಮದ್ ಪೈಲ್ವಾನ್ ಸತ್ತಿರೋದ್ರಿಂದ ಹಳೆ ಹೈದರಾಬಾದಿನಲ್ಲಿ ಒಂದಿಷ್ಟು ಗಲಾಟೆ ಆದ್ರೂ ಆಗಬಹುದು. ಅಪೋಸಿಷನ್ ಪಾರ್ಟಿ ಲೀಡರ್ ನರಸಿಂಹರೆಡ್ಡಿಯವರಿಗೆ ಫೋನು ಮಾಡಿ ಧೈರ್ಯ ಹೇಳಿದ್ದಾರೆ. ನಾಳೆ ಅವ್ರು ಇಲ್ಲಿಗೆ ಬರೋ ಪ್ರೋಗ್ರಾಂ ಇದೆ. ಇಡೀ ಚೆರ್ಲಪಲ್ಲಿ ಮಂಡಲಂ ಬೂದಿ ಮುಚ್ಚಿದ ಕೆಂಡದಂತಿದೆ. ಇನ್ನೊಂದು ದೊಡ್ಡ ಎಡವಟ್ಟಾಗಿದೆ. ನೀನು ನಿನ್ನೆ ಬೆಳಿಗ್ಗೆ ಇಲ್ಲಿಂದ ಹೊರಟ ಮೇಲೆ ನರಸಿಂಹರೆಡ್ಡಿ ಹೇಳಿದ್ರು. ಬೆಂಗಳೂರಿನ ಅರ್ಧ ಎಕರೆ ನಿನಗೆ ದಾನಪತ್ರ ಅಂತ ಮಾಡಿಕೊಟ್ಟಿದ್ದಾರಲ್ಲ... ಅದನ್ನು ಈ ಮೊದ್ಲೆ ಬೆಂಗಳೂರಿನಲ್ಲಿ ಯಾರಿಗೋ ಕ್ರಯಪತ್ರ ಮಾಡಿಕೊಟ್ಟಿರುವರಂತೆ. ಹತ್ತು ವರ್ಷಗಳ